

ದೇವದಂಕ್‌ನ ಗುಹೆ





## ಕಿನ್ನರ್ ಕೈಲಾಶ್

ಹಿಮಾಚಲ ಪ್ರದೇಶದಲ್ಲಿ ಪ್ರಯಾಣಿಸುವುದೆಂದರೆ ಒಂದು ಅದ್ಭುತ ಅನುಭವ. ಈ ಅನುಭವವು ಪೂರ್ಣಗೊಳ್ಳಬೇಕಾದರೆ ಪ್ರತಿಯೊಬ್ಬ ವ್ಯಕ್ತಿಗೂ ಅದರಲ್ಲಿ ಆಳವಾದ ನಂಬಿಕೆ ಮತ್ತು ಧೈರ್ಯವಿರಬೇಕು. ಪ್ರಕೃತಿ ಸೌಂದರ್ಯವನ್ನು ಸವಿಯುವ ಮನಸ್ಸೂ ಇರಬೇಕು.

ಸಂಜೆಯ ಹೊತ್ತಿಗೆ ನಾವು ರಿಕೊಂಗ್ ಪಿಯೋ ಜಿಲ್ಲೆಯ ಮೂಲಸ್ಥಾನದ ಕಲ್ಪವನ್ನು ಮುಟ್ಟಿದೆವು. ನಮ್ಮ ಮುಂದಿನ ದಾರಿ ಕಿನ್ನರ್ ಕೈಲಾಸಕ್ಕೆ. ಇದು ಒಂದೇ ಬಂಡೆಯಿಂದ ರೂಪಿತವಾದ ಕೈಲಾಸ ಶಿಖರ. ಮರುದಿನ ಸಟ್ಲೆಜ್ ನದಿಯನ್ನು ದಾಟಿ ಶಾಂಗ್‌ಟಾಂಗ್‌ನ ತ್ಯಾಂಗ್ಲಿಂಗ್ ಗ್ರಾಮ ತಲುಪಿದೆವು. ಪವಿತ್ರ ಶಿವಲಿಂಗದ ದರ್ಶನ ಪಡೆಯುವುದಕ್ಕೆ ಇಲ್ಲಿಂದ ಮೂರು ದಿನ ಕಾಲ್ನಡಿಗೆಯ ಪ್ರಯಾಣವಿದೆ.

ಸ್ಥಳೀಯರ ಮಾರ್ಗದರ್ಶನ ಪಡೆದು ನಡಿಗೆ ಆರಂಭಿಸಿ ಮೊದಲು ಆಫಲ್, ಅಪ್ರಿಕೋಟ್ ಮತ್ತು ಪ್ಲಂ ಆರ್ಚಿಡ್‌ಗಳನ್ನು ದಾಟಿದೆವು. ಅತ್ಯಂತ ಎತ್ತರದಲ್ಲಿರುವ ಬಂಬೂ ಕಾಡಿನ ಗುಹೆಯನ್ನು ಪ್ರವೇಶಿಸಿ ಅಲ್ಲಿಯೇ ರಾತ್ರಿ ಕಳೆದೆವು.

ಮರುದಿನ ಬೆಳಿಗ್ಗೆ ಬೆಳಕು ಕಾಣಿಸುವ ಮುನ್ನವೇ ಪ್ರಯಾಣ ಆರಂಭಿಸಿ ಕಿನ್ನರ್ ಕೈಲಾಸ ಪರ್ವತ ಶ್ರೇಣಿಯ ಶಿವಲಿಂಗವನ್ನು ತಲುಪಿದೆವು. ಮಧ್ಯದಲ್ಲಿ ದಾರಿಯುದ್ದಕ್ಕೂ ಅನೇಕ ಹಿಮಪಾತಗಳನ್ನು ದಾಟಿದೆವು. ಅರ್ಧ ದಾರಿಯಲ್ಲಿ ಚಿಕ್ಕದಾದ ಹಿಮಪಾತದ ಹೊಂಡವನ್ನು ನೋಡಿದೆವು. ಅದನ್ನು ಗೌರಿ ಕುಂಡ ಎಂದು ಕರೆಯುತ್ತಾರೆ. ಗೌರಿಗೆ ಪ್ರಾರ್ಥನೆ ಸಲ್ಲಿಸಿ ಮುಂದೆ ಪ್ರಯಾಣ ಬೆಳೆಸಿದೆವು.

ಇಲ್ಲಿಂದ ಏರುಪೇರಾದ ಮತ್ತು ಅಡ್ಡಾದಿಡ್ಡಿ ಬಂಡೆಗಳ ತಿರುವು ತುಂಬಿರುವ ಕಠಿಣ ಹಾದಿ. ಎಚ್ಚರ ತಪ್ಪಿದರೆ ಅಪಾಯ ಕಟ್ಟಿಟ್ಟ ಬುತ್ತಿ. ಅತಿದೊಡ್ಡ ಬೆಟ್ಟವನ್ನು ಹತ್ತಲು ತುಂಬಾ ಪ್ರಯಾಸ ಪಡಬೇಕು. ವಿಪರೀತದ ಹವಾಗುಣ ಮತ್ತು ಸುರಿಯುವ ಹಿಮ ದಾರಿಯುದ್ದಕ್ಕೂ ತೊಂದರೆ ಕೊಡುತ್ತದೆ. ನಡೆಯುವ ದಾರಿಯಲ್ಲಿ ಅಲ್ಲಲ್ಲಿ ಕಲ್ಲುಗಳು ಮತ್ತು ಬಂಡೆಗಳು ಬೀಳುತ್ತಿರುತ್ತವೆ.

ನಾವು ಒಂದೊಂದೇ ಬಂಡೆಗಳನ್ನು ದಾಟಿಕೊಂಡು 70 ಅಡಿ ಎತ್ತರವಿರುವ ಬೆಟ್ಟದ ತುದಿ ತಲುಪಿದೆವು. ಸಮುದ್ರಮಟ್ಟದಿಂದ 18,500 ಸಾವಿರ ಅಡಿ ಎತ್ತರದಲ್ಲಿರುವ, ಒಂದೇ ಬಂಡೆಯಲ್ಲಿ ಕೆತ್ತಿರುವ ಅಖಂಡ ಶಿವಲಿಂಗ ಇರುವ ಜಾಗವಿದು. ನೇರವಾಗಿ ಎದ್ದು ನಿಂತ ಸಮಎತ್ತರದ ಲಿಂಗವಿದು. ಪ್ರಕೃತಿಯ ಪವಾಡವೆಂಬಂತೆ ಲಿಂಗವು ಸೂರ್ಯನ ಬೆಳಕಿಗೆ ಅನುಗುಣವಾಗಿ ಬಣ್ಣ ಬದಲಾಯಿಸುತ್ತಿರುತ್ತದೆ. ನಾವೂ ಮೋಡಗಳ ಮೇಲೆಯೇ ನಡೆಯುವಂತಹ ಅನುಭವ! ಪ್ರತಿವರ್ಷ ಜುಲೈನಲ್ಲಿ ಕಿನ್ನರ್ ಕೈಲಾಸ್ ಮತ್ತು ಶ್ರೀಖಂದ ಮಹದೇವ ಯಾತ್ರೆ ಸಂಘಟಿತವಾಗಿ ನಡೆಯುತ್ತದೆ. ಸಾವಿರಾರು ಭಕ್ತರು ಯಾತ್ರೆಯಲ್ಲಿ ಪಾಲ್ಗೊಂಡು ಧಾರ್ಮಿಕ ಅನುಭೂತಿಯನ್ನು ಹೊಂದುತ್ತಾರೆ.